◆ ನಿಮ್ಮ ರಂಗಭೂಮಿ ದಿನಗಳನ್ನು ನೆನಪಿಸಿಕೊಳ್ಳಿ?

ಕಾಲೇಜಲ್ಲಿ ಓದುತ್ತಿದ್ದಾಗಲೇ ರಂಗಭೂಮಿಯಲ್ಲಿ ನಟನೆ ಆರಂಭಿಸಿದ್ದು. ನನಗಾಗಲೇ ರಂಗಭೂಮಿ ಕುರಿತು ತುಂಬ ಆಸಕ್ತಿ ಇತ್ತು. ಆದರೆ ಅವಕಾಶ ಪಡೆದುಕೊಳ್ಳುವುದು ಹೇಗೆ, ಎಲ್ಲಿ ಆಡಿಷನ್ ಕೊಡ್ತಾರೆ ಎಂಬುದೆಲ್ಲ ಏನೂ ಗೊತ್ತಿರಲಿಲ್ಲ. ನನ್ನ ಸ್ನೇಹಿತೆಗೆ ನನ್ನ ಆಸಕ್ತಿಯ ಬಗ್ಗೆ ಗೊತ್ತಿತ್ತು. ಅವಳು ಒಂದು ದಿನ ಫೇಸ್‌ಬುಕ್‌ನಲ್ಲಿ ರಂಗಭೂಮಿ ಕಲಾವಿದರ ಆಡಿಷನ್ ಕುರಿತು ಹಾಕಿದ ಪ್ರಕಟಣೆ ನೋಡಿ ನನಗೆ ಹೇಳಿದಳು. ಅಷ್ಟು ವರ್ಷದಿಂದ ನಾನು ಬಯಸುತ್ತಿದ್ದ ಜಗತ್ತಿನ ಬಾಗಿಲು ಆಗ ತೆರೆದುಕೊಳ್ಳುವುದರಲ್ಲಿತ್ತು. ಆ ನಂಬರ್‌ಗೆ ಮೊದಲು ಫೋನ್ ಮಾಡಲು ನಾನು ಭಯಪಟ್ಟಿದ್ದು ಇನ್ನೂ ನೆನಪಿದೆ. ಶನಿವಾರ ಸಂಜೆ ಆಡಿಷನ್‌ಗೆ ವೇಳೆ ನಿಗದಿ ಆಯಿತು. ಶುಕ್ರವಾರ ರಾತ್ರಿಯಿಡೀ ಭಯದಲ್ಲಿಯೇ ಇದ್ದೆ. ಕ್ಯಾನ್ಸಲ್ ಮಾಡಿಬಿಡೋಣ ಅಂತಲೂ ಅನಿಸಿತು. ಆದರೆ ಶನಿವಾರ ಬೆಳಿಗ್ಗೆ, 'ಇಂಥದ್ದೊಂದು ಅವಕಾಶ ಸಿಕ್ಕಿದೆ, ಬಳಸಿಕೊಳ್ಳಬೇಕು. ಇಲ್ಲಾಂದ್ರೆ ಮತ್ತೊಂದು ಅವಕಾಶ ಸಿಗುವುದಿಲ್ಲ' ಅನಿಸಿಬಿಡ್ತು. ಆಡಿಷನ್‌ಗೆ ಹೋದೆ; ಸೆಲೆಕ್ಟ್ ಕೂಡ ಆದೆ. ನಾನು ಮೊದಲು ಮಾಡಿದ ನಾಟಕ 'ಡ್ರೀಮ್ 2012'.

◆ ನಿಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ರಂಗಭೂಮಿಯ ಪಾತ್ರ ಎಂಥದ್ದು?

ಆ ದಿನಗಳೇ ಬೇರೆ ಥರ ಇದ್ದವು. ನನಗಾಗ ಆ್ಯಕ್ಟಿಂಗ್ ಅಂದರೆ ರಂಗಭೂಮಿ, ರಂಗಭೂಮಿ ಅಂದ್ರೆ ಆ್ಯಕ್ಟಿಂಗ್. ನಮ್ಮ ತಂಡದಲ್ಲಿದ್ದ ಎಲ್ಲರೂ ಕೆಲಸದಲ್ಲಿದ್ದವರೇ. ಬೆಳಿಗ್ಗೆ ಐದು ಗಂಟೆಗೆ ಮನೆಬಿಟ್ಟು ಐದೂ ಮುಕ್ಕಾಲಿಗೆ ತಾಲೀಮು ಶುರು ಮಾಡ್ತಿದ್ವಿ. ಏಳೂವರೆ–ಏಳೂಮುಕ್ಕಾಲಿಗೆ ಎಲ್ಲರೂ ಮತ್ತೆ ಮನೆಗೆ ಹೋಗಿ ಆಫೀಸಿಗೆ ಹೋಗ್ತಿದ್ವಿ. ಸಂಜೆಯೂ ಮತ್ತೆ 6.30ಕ್ಕೆ ಹೊರಟು ಏಳೂವರೆಯಿಂದ ಎಂಟೂವರೆಯವರೆಗೆ ತಾಲೀಮು ಮಾಡ್ತಿದ್ವಿ. ಆಗ ನನಗೆ ಒಂದು ನಾಟಕಕ್ಕೆ ಎರಡು ಸಾವಿರದಿಂದ ಮೂರು ಸಾವಿರ ರೂಪಾಯಿ ಸಿಕ್ಕರೆ ಹೆಚ್ಚು. ಅದಕ್ಕಾಗಿ ಎರಡು ಎರಡೂವರೆ ತಿಂಗಳು ತಾಲೀಮು ಮಾಡ್ತಿದ್ವಿ. ಆ ಎರಡೂವರೆ ಸಾವಿರದಲ್ಲಿ ಎಂಥ ಖುಷಿ ಸಿಗ್ತಿತ್ತು ಗೊತ್ತಾ? ನಾನೇ ದುಡಿದಿದ್ದು ಎಂಬ ಹೆಮ್ಮೆ.

ಬೆಂಗಳೂರು ಬಿಟ್ಟು ಮುಂಬೈ, ಚೆನ್ನೈ, ಗೋವಾಗಳಿಗೆಲ್ಲ ಹೋಗಿ ನಾಟಕ ಆಡುವಾಗ, ನಮ್ಮ ನಾಟಕವನ್ನು ಬೇರೆ ಊರಿಗೆ ತೆಗೆದುಕೊಂಡು ಹೋಗ್ತಾ ಇದ್ದೀವಿ ಎಂಬ ಹೆಮ್ಮೆ ಇರ್ತಿತ್ತು. ನಾವು ಸ್ಟಾರ್ ಅನ್ನೋ ಫೀಲಿಂಗ್ ಇರ್ತಿತ್ತು.

ನಾಟಕ ಅಂದ್ರೇನೆ ಟೀಂವರ್ಕ್. ಅಲ್ಲಿ ಹೀರೊ ಹೀರೊಯಿನ್ ಇರಲ್ಲ. ನಮಗೆ ಯಾರೂ ಮೇಕಪ್ ಮಾಡೋಕೆ ಬರಲ್ಲ. ನಾವೇ ಮೇಕಪ್ ಮಾಡಬೇಕು. ಜೊತೆಗಿರುವವರಿಗೂ ಮೇಕಪ್ ಮಾಡಿಕೊಳ್ಳಲು ಸಹಾಯ ಮಾಡಬೇಕು. ಷೋ ಮುಗಿದ ಮೇಲೆ ಚಕಚಕನೇ ಪ್ರಾಪರ್ಟಿಗಳನ್ನೆಲ್ಲ ಬಿಚ್ಚಲು ನಾವೂ ಸಹಾಯ ಮಾಡ್ತಿದ್ವಿ. ಅಲ್ಲಿ ದೊಡ್ಡವರು, ಸಣ್ಣವರು ಎಂದೆಲ್ಲ ಏನೂ ಇಲ್ಲ. ಟೀಂನ ಸದಸ್ಯರು ಎಲ್ಲರೂ ಒಂದೇ.

ವರ್ಷದಲ್ಲಿ ನಮ್ಮ ನಾಟಕದ ಕುರಿತು ಪತ್ರಿಕೆಗಳಲ್ಲಿ ಹೆಚ್ಚೆಂದರೆ ಎರಡು ಲೇಖನ ಬರ್ತಾ ಇತ್ತು. ಅದರಲ್ಲಿ ಒಂದು ಗ್ರೂಪ್ ಫೋಟೊ ಇರ್ತಾ ಇತ್ತು. ಅದರಲ್ಲಿ ನಾನೂ ಇರ್ತಿದ್ದೆ. ಅದನ್ನೇ ನೋಡಿ ಎಷ್ಟು ಖುಷಿ ಪಡ್ತಿದ್ವಿ... ನಾಟಕ ಪ್ರದರ್ಶನವಾದ ಮೇಲೆ ಪ್ರೇಕ್ಷಕರು ನಮ್ಮನ್ನು ಹುಡುಕಿಕೊಂಡು ಗ್ರೀನ್‌ರೂಮಿಗೆ ಬಂದು ವಿಷ್ ಮಾಡ್ತಿದ್ರು. ಅದು ದೊಡ್ಡ ಥ್ರಿಲ್ ಕೊಡುತ್ತಿದ್ದ ಸಂಗತಿ.

ಎಷ್ಟೆಲ್ಲ ಶ್ರಮ ಪಡುತ್ತಿದ್ದೆವು. ಅದನ್ನೆಲ್ಲ ದುಡ್ಡಿಗೋಸ್ಕರ ಮಾಡ್ತಾ ಇರಲಿಲ್ಲ; ಪ್ರಸಿದ್ಧಿಗೋಸ್ಕರ ಮಾಡ್ತಾ ಇರಲಿಲ್ಲ. ಅಮ್ಮ–ಅಪ್ಪ ನನ್ನ ಕಷ್ಟ ನೋಡಿ ಟೆನ್ಷನ್ ಮಾಡಿಕೊಳ್ತಿದ್ರು. 'ಎಷ್ಟೊಂದು ಹಾರ್ಡ್‌ವರ್ಕ್ ಮಾಡ್ತಾಳಲ್ವಾ ಮಗಳು' ಎಂದು ಚಿಂತೆ ಮಾಡ್ತಿದ್ರು. ನಾನವರಿಗೆ ಹೇಳ್ತಿದ್ದೆ; 'ನನ್ನ ಬಗ್ಗೆ ಯೋಚನೆ ಮಾಡಬೇಡಿ. ನನಗೆ ಇದರಿಂದಲೇ ಖುಷಿ ಸಿಗ್ತಾ ಇದೆ. ಮಧ್ಯದಲ್ಲಿ ಎಂಟು ಗಂಟೆ ಆಫೀಸು ಕೆಲಸಕ್ಕೆ ಹೋಗ್ತೀನಲ್ವಾ. ಅದರಿಂದ ಏನೂ ಸಿಗ್ತಾ ಇಲ್ಲ.'

◆ ಅಷ್ಟು ವರ್ಷದ ರಂಗಭೂಮಿ ನಿಮಗೆ ಕಲಿಸಿಕೊಟ್ಟಿರುವುದೇನು?

ತುಂಬ ಸಂಗತಿಗಳನ್ನು ಕಲಿತಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ಟೀಂವರ್ಕ್‌ನ ಮಹತ್ವ. ರಂಗಭೂಮಿಯಲ್ಲಿ ನಮಗಿಂತ ನಮ್ಮ ಪಾತ್ರ ಮುಖ್ಯ. ನನ್ನ ರಂಗಭೂಮಿ ದಿನಗಳಲ್ಲಿ ನಾನು ಅಜ್ಜಿಯ ಪಾತ್ರದಲ್ಲಿ ನಟಿಸಿದ್ದೇನೆ; ವೇಶ್ಯೆಯ

**‘ಅಂತರ್ಜಾಲ ಒಳ್ಳೆಯ ವೇದಿಕೆ. ಆದರೆ ಇದರಿಂದ ಕೆಟ್ಟದ್ದೂ ಅಷ್ಟೇ ಆಗುತ್ತಿದೆ. ಇದರಿಂದ ಮನುಷ್ಯ ಮನುಷ್ಯರ ನಡುವಿನ ದ್ವೇಷ ಜಾಸ್ತಿಯಾಗಿದೆ. ಬಾಯಿಗೆ ಬಂದಹಾಗೆಯೇ ಟೈಪ್ ಮಾಡಿ ಕಮೆಂಟ್ ಮಾಡ್ತಾರೆ. ಇಂಟರ್‌ನೆಟ್ ಎನ್ನುವುದು ಮೂರ್ಖರ ಆಟದ ಮೈದಾನವಾಗಿಬಿಟ್ಟಿದೆ.**

